ಅವಾಸ್ತವವಾಗಲಿ ಖಂಡಿತಾ ಅಲ್ಲ ಎಂಬುದು ನನ್ನ ಗಟ್ಟಿ ನಂಬಿಕೆ. ಎಂತಹ ಪ್ರತಿಕೂಲ ಪರಿಸರದಿಂದಲೂ ಪುಟಿದು ಚಿಮ್ಮುವ ಶಕ್ತಿ ಮನುಷ್ಯನಿಗಿದೆ. ಬಹು ಕೋಟಿ ಕಂಪನಿಯನ್ನು ತೆರೆದು 200ಕ್ಕೂ ಹೆಚ್ಚು ಅಂಧರಿಗೆ ಉದ್ಯೋಗ ಒದಗಿಸಿಕೊಟ್ಟಿರುವ ಕುರುಡು ಯುವಕ ಭವೇಶ್ ಭಾಟಿಯಾ ಅವರ ಜೀವನಕತೆಯನ್ನು ಅವರೊಡನೆಯ ಭೆಟ್ಟಿಗಳಲ್ಲಿ ಈಗ ಬರೆಯುತ್ತಿದ್ದೇನೆ. ಒಂದು ರಾತ್ರಿ ನಮ್ಮ ಮನೆಗೆ ಬಂದಿಳಿದು, ಬೆಂಗಳೂರಿನ 'ಸುಮಂಗಲಿ ಸೇವಾಶ್ರಮ'ದಲ್ಲಿ ಆಶ್ರಯ ಪಡೆದ ಹುಡುಗಿ ಜ್ಯೋತಿ, ನಂತರ ಹನ್ನೊಂದು ವರ್ಷಗಳ ಹಿಂದೆ ನಿರ್ಗತಿಕ ಮಕ್ಕಳಿಗೆ 'ತಾಯಿಮನೆ' ತೆರೆದು ಇಂದು 120 ಮಕ್ಕಳಿಗೆ ಬದುಕು ನೀಡುತ್ತಿದ್ದಾಳೆ.

> ಜಗತ್ತು ವಿಪರೀತವಾಗಿ ಪೌರುಷದಿಂದ ಮೆರೆಯುತ್ತಿರುವ ಈ ಹೊತ್ತು, ಯುದ್ಧ ಕಲಹ ಹಿಂಸೆ ಅಪರಾಧಗಳಲ್ಲಿ ಮುಳುಗಿರುವ ಈ ಹೊತ್ತು, ಹೆಣ್ಣಿನ ಸ್ಥಿತಿ ಬಹಳಷ್ಟು ಅಪಾಯದಲ್ಲಿದೆ.

ಇಂತಹ ನೂರಾರು ಉದಾಹರಣೆಗಳು ನನ್ನಲ್ಲಿವೆ. ಹಿಂಸೆ, ಅಪರಾಧ, ಮಿತಿಮೀರಿದ ಸ್ವಾರ್ಥ, ಜಾತಿ ಧರ್ಮಗಳ ಹೆಸರಲ್ಲಿ ಇಂದು ಜಗತ್ತು ಹರಿದು ಹಂಚಿ ಹೋಗುತ್ತಿರುವ ಹೊತ್ತಿನಲ್ಲಿ ಸಕಾರಾತ್ಮಕ ಚಿಂತನೆಯನ್ನು ಪ್ರಯತ್ನಪೂರ್ವಕವಾಗಿಯಾದರೂ ಬೆಳೆಸಿಕೊಳ್ಳುವ ಅಗತ್ಯವಿದೆ.

ನಾನು ಕಂಡ ಸಕಾರಾತ್ಮಕ ವ್ಯಕ್ತಿಗಳು, ನನ್ನ ಬದುಕಿಗೆ ಮತ್ತು ಬರಹಕ್ಕೆ ಸದಾ ಸ್ಫೂರ್ತಿಯಾಗಿದ್ದಾರೆ. ಅವರ ಬೆಳಕು ನೀಡುವ ಕಾಯಕದಲ್ಲಿ ಕೈಜೋಡಿಸುವ ಬಯಕೆ ನನ್ನದು. ಜಾತಿಯಿಲ್ಲದ, ಭೀತಿಯಿಲ್ಲದ, ಲಿಂಗತಾರತಮ್ಯವಿಲ್ಲದ ಸಮಾನತೆಯ ಬುನಾದಿಯ ಮೇಲೆ ನಿಂತ ಸಮಾಜದ ಕನಸು ಹೊತ್ತು ದುಡಿಯುವ ಜನರ ಸಾಂಗತ್ಯ ನನ್ನ ಬರಹಗಳಿಗೆ ಬುನಾದಿಯಾಗಿದೆ. ಆ ಕನಸನ್ನು ನನಸಾಗಿಸಲು ಕತ್ತಲ ಹಾದಿಯಲ್ಲಿ ದೊಂದಿ ಹಿಡಿದು ನಡೆದ ಜನರೊಡನೆ ನಾಲ್ಕು ಹೆಜ್ಜೆ ಹಾಕುವ ಹಂಬಲವೇ ನನ್ನ ಬದುಕಿಗೆ ಮತ್ತು ಬರಹಕ್ಕೆ ಮತ್ತಷ್ಟು ಉತ್ಸಾಹವನ್ನು ನೀಡಿದೆ. asdsddsf

◆ ಮಹಿಳಾ ಸಂಘಟನೆಗಳೊಡನೆಯ ನಿಮ್ಮ ಒಡನಾಟ, ನಿಮ್ಮ ಲೋಕದೃಷ್ಟಿಯನ್ನು ರೂಪಿಸುವಲ್ಲಿ ಹೇಗೆ ನೆರವಾಗಿದೆ?

ನನ್ನನ್ನು ಲೇಖಕಿಯಾಗಿ ಬೆಳೆಸಿದ್ದು 'ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ'ದ 1985ರಲ್ಲಿ ಹೊರಬಂದ 'ಅಚಲ' ಪತ್ರಿಕೆ ಮತ್ತು 'ಕರ್ನಾಟಕ ಲೇಖಕಿಯರ ಸಂಘ'ದೊಂದಿಗಿನ ನನ್ನ ಒಡನಾಟ. ಇದು, ಬದುಕಿನ ಇನ್ನಿಲ್ಲದಷ್ಟು ಆಯಾಮಗಳನ್ನು ನನಗೆ ತೆರೆದು ತೋರಿಸಿತು. ಸಂಘಟನೆ ಮತ್ತು ಚಳವಳಿಯ ಅನುಭವಗಳು, ನನ್ನ ಬರಹಕ್ಕೆ 'ಕಟ್ಟು ಚೌಕಟ್ಟು'ಗಳನ್ನು ಹಾಕಿ ನಿರ್ಬಂಧಿಸಲಿಲ್ಲ. ಬದಲಿಗೆ ವೈಯಕ್ತಿಕ ನೆಲೆಯ ಪ್ರೀತಿ ಪ್ರೇಮದ ಹುಡುಕಾಟದಲ್ಲಿ ಕಟ್ಟಿ ಬಿದ್ದ ಕತೆಗಳು ಬಂಧಮುಕ್ತವಾಗಿ, ಸಮಾಜಮುಖಿಯಾಗಿ ಸರಹದ್ದುಗಳನ್ನು ಅಳಿಸಿ ಮಾನವೀಯ ನೆಲೆಗಳನ್ನು ಅರಸಲು ಕಾರಣವಾಯಿತು. ಎಲ್ಲಿಯೋ ನಡೆಯುವ ಘಟನೆಗಳು ನಮಗೆ ಸಂಬಂಧವಿಲ್ಲ ಎಂಬ ಅಜ್ಞಾನದಲ್ಲಿ ನನ್ನಂತಹ ಎಳೆಯ ಬರಹಗಾರರು ತಮ್ಮೊಳಗೇ ಕಳೆದುಹೋಗುವ ಅಪಾಯವಿತ್ತು. 'ಅಚಲ'ದ ಒಡನಾಟ ನನ್ನನ್ನು ಆ ಅಪಾಯದಿಂದ ಕಾಪಾಡಿತು ಎಂಬ ನಂಬುಗೆ ನನ್ನದು.

◆ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಪುನರ್ ನಿರ್ಮಿಸುವ ಪ್ರಕ್ರಿಯೆಯಲ್ಲಿ ಬೆಳಗೆರೆ